ಬಾಗೇಪಲ್ಲಿಯ ಪೋಲೀಸ್ ಠಾಣೆಯಲ್ಲಿ ಐ.ಪಿ.ಸಿ.ಯ 143, 144, 147, 148 149 ಮತ್ತು 329ರನ್ವಯ ಕೇಸನ್ನು ದಾಖಲು ಮಾಡಿಕೊಳ್ಳಲಾಗಿದೆ. ಶ್ರೀನಿವಾಸಚಾರ್‌ರವರು ಬಾಗೇಪಲ್ಲಿಯ ಸರ್ಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದು, ಶ್ರೀ ಚಂದ್ರಶೇಖರ್ ಅವರನ್ನು ಚಿಕ್ಕಬಳ್ಳಾಪುರದ ಆಸ್ಪತ್ರೆಗೆ ಹೆಚ್ಚಿನ ಚಿಕಿತ್ಸೆಗಾಗಿ ವರ್ಗಾಯಿಸಲಾಗಿದೆ. ಈ ಪ್ರಕರಣದಲ್ಲಿ ಆಪಾದಿತರಾದ ಬಾಲಾಜಿ ರೆಡ್ಡಿ, ನಾರಾಯಣಸ್ವಾಮಿ, ಆಜಿಮುಲ್ಲಾ, ಜಯರಾಮನಾಯಕ್, ರಮೇಶ್, ಶಂಕರರೆಡ್ಡಿ ಮತ್ತು ವೆಂಕಟರತ್ನಂ ಇವರುಗಳನ್ನು ದಸ್ತಗಿರಿ ಮಾಡಿ ನಂತರ ಜಾಮೀನಿನ ಮೇಲೆ ಬಿಡುಗಡೆ ಮಾಡಲಾಗಿದೆ. ಇನ್ನೊಬ್ಬ ಆಪಾದಿತನಾದ ವೇಣುಗೋಪಾಲ್ ಬೆಂಗಳೂರಿನಲ್ಲಿ ಚಿಕಿತ್ಸೆ ಪಡೆಯುತ್ತಿರುವುದರಿಂದ ಅವರನ್ನು ಇನ್ನೂ ಬಂಧಿಸಲಾಗಿಲ್ಲ.

ಇದಲ್ಲದೆ ಬಾಗೇಪಲ್ಲಿಯ ಜನರಲ್ ಆಸ್ಪತ್ರೆಯಲ್ಲಿ ಗಾಯಾಳು ಆಗಿರುವ ಶ್ರೀ ವೇಣುಗೋಪಾಲ್‌ರವರ ಹೇಳಿಕೆಯ ಮೇರೆಗೆ ಐ.ಪಿ.ಸಿ.ಯ ಕಲಂ 143,144,147,148,323,324 ಅನ್ವಯ ಬಾಗೇಪಲ್ಲಿಯ ಪೋಲೀಸ್ ಠಾಣೆಯಲ್ಲಿ ಕೇಸನ್ನು ದಾಖಲು ಮಾಡಿಕೊಳ್ಳಲಾಗಿದೆ. ಅದರ ಪ್ರಕಾರ ವೇಣುಗೋಪಾಲ್‌ರವರು ದಿನಾಂಕ 3-3-92ರ ಸಾಯಂಕಾಲ 7-30ರ ಸಮಯದಲ್ಲಿ ಚಿಕಿತ್ಸೆ ಪಡೆಯಲು ಆಸ್ಪತ್ರೆಗೆ ಬಂದಾಗ ಆಪಾದಿತರಾದ ನರಸಿಂಹನಾಯ್ಡು, ನರಸಿಂಹಮೂರ್ತಿ, ವೆಂಕಟೇಶ ಬೋವಿ ಅಶ್ವತ್ಥನಾರಾಯಣ, ಪ್ರಕಾಶ್, ಮಾಸ್ಟರ್ ರಂಗಯ್ಯ ನಾಯ್ಡು ಹಾಗು ವೆಂಕಟೇಶ್‌ಬಾಬುರವರು ಸೈಕಲ್ ಚೈನು ಮತ್ತು ಚಾಕುವಿನಿಂದ ಹೊಡೆದು ಗಾಯಗೊಳಿಸಿರುತ್ತಾರೆ.

ಬಾಗೇಪಲ್ಲಿಯ ಪೋಲೀಸರು ಐ.ಪಿ.ಸಿ.ಯ ಕಲಂ 279, 337ರನ್ವಯ ಈ ಬಗ್ಗೆ ಕೇಸನ್ನು ದಾಖಲು ಮಾಡಿಕೊಂಡಿರುತ್ತಾರೆ. ಆರೋಪಿಗಳಾದ ನರಸಿಂಹನಾಯ್ಡು, ಪ್ರಕಾಶ್ ವೆಂಕಟೇಶ್‌ಬಾಬು, ಅಶ್ವತ್ಥನಾರಾಯಣ, ರಂಗಯ್ಯನಾಯ್ಡು ಇವರುಗಳನ್ನು ಎರಡು ಕೇಸಿನಲ್ಲಿ 6-3-91ರಂದು ದಸ್ತಗಿರಿ ಮಾಡಿ ನಂತರ ಜಾಮೀನಿನ ಮೇಲೆ ಬಿಡುಗಡೆ ಮಾಡಲಾಗಿರುತ್ತದೆ. ವಾಲಿಬಾಲ್ ಆಟದಲ್ಲಿ ಎರಡೂ ಕಡೆಯವರು ಕೂಡಲೇ ಪ್ರಚೋದನೆಗೊಂಡಿದ್ದು ಈ ಹೊಡೆದಾಟಕ್ಕೆ ಕಾರಣವೆಂದು ತಿಳಿದುಬಂದಿರುತ್ತದೆ. ಈ ಪ್ರಕರಣದಲ್ಲಿ 17ಜನರು ಗಾಯಗೊಂಡಿದ್ದು ಗಾಯಳುಗಳ ಹೇಳಿಕೆಯನ್ನು ಪೋಲೀಸ್‌ನವರು ಜನರಲ್ ಆಸ್ಪತ್ರೆಯಲ್ಲಿ ಪಡೆಯುತ್ತಿದ್ದಾಗ ಆಸ್ಪತ್ರೆ ಆವರಣದಲ್ಲಿ ಆರಚುವ ಮತ್ತು ಗಲಾಟೆ ಶಬ್ದ ಎರಡು ಪಾರ್ಟಿಗಳಿಂದ ಉಂಟಾಗುತ್ತಿದ್ದು ತೀವ್ರ ಗಲಭೆಯನ್ನು ತಪ್ಪಿಸಿದ್ದಾರೆ. ಆದ್ದರಿಂದ ಪೋಲೀಸರು ಗಾಯಳುಗಳನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗುವಾಗ ಈ ಘಟನೆ ನಡೆಯುತ್ತೆಂದು ಹೇಳುವುದು ಸರಿಯಲ್ಲ.

ಶ್ರೀ ಬಿ.ಎ. ಇದಿನಬ್ಬರವರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು.

2. ಬೆಂಗಳೂರು – ಮೈಸೂರು ಹೆದ್ದಾರಿಯನ್ನು ವಿಸ್ತರಿಸುವುದು.

ಶ್ರೀ ಎಂ.ಎಸ್. ಆತ್ಮಾನಂದ (ಮಂಡ್ಯ): ಮಾನ್ಯ ಅಧ್ಯಕ್ಷರೇ, ಬೆಂಗಳೂರು-ಮೈಸೂರು ಹೆದ್ದಾರಿಯಲ್ಲಿ ವಿಪರೀತವಾಗಿ ವಾಹನಗಳ ಓಡಾಟ ಜಾಸ್ತಿಯಾಗಿರುವುದರಿಂದಲೂ, ರಸ್ತೆ ಸಾಕಷ್ಟು ಅಗಲವಿಲ್ಲದಿರುವುದರಿಂದಲೂ ಹಾಗೂ ಈ ಹೆದ್ದಾರಿಯಲ್ಲೇ ಹೆಚ್ಚುತ್ತಿದ್ದು ಸಾರ್ವಜನಿಕರಿಗೆ ತೊಂದರೆಯಾಗಿದೆ. ವಾಹನಗಳ ಒತ್ತಡಕ್ಕನುಗುಣವಾಗಿ ರಸ್ತೆ ಅನುಗುಣವಾಗಿಲ್ಲದೇ ಇರುವುದರಿಂದ ಬೆಂಗಳೂರು-ಮೈಸೂರು ಹೆದ್ದಾರಿಯನ್ನು ಸಾಧ್ಯವಾದಷ್ಟುಮಟ್ಟಿಗೆ ಅಗಲಗೊಳಿಸುವ ಮೂಲಕ ವಾಹನಸಂಚಾರದ ಒತ್ತಡವನ್ನು ಸುಗಮಗೊಳಿಸುವುದಲ್ಲದೆ ಸಾರ್ವಜನಿಕರ ತೊಂದರೆಯನ್ನೂ ಸಹ ನಿವಾರಿಸುವ ಕ್ರಮವನ್ನು ಕೂಡಲೇ ಕೈಗೊಳ್ಳಬೇಕೆಂದು ಸರ್ಕಾರವನ್ನು ಒತ್ತಾಯಿಸುತ್ತೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ (ಶಿಕ್ಷಣ ಹಾಗೂ ಸಂಸದೀಯ ವ್ಯವಹಾರಗಳ ಸಚಿವರು) : ಮಾನ್ಯ ಅಧ್ಯಕ್ಷರೆ ಈ ಕೆಳಕಂಡ ಹೇಳಿಕೆಯನ್ನು ನೀಡಬಯಸುತ್ತೇನೆ.

ಮೈಸೂರು ಹೆದ್ದಾರಿಯಲ್ಲಿ ವಿಪರೀತವಾಗಿ ವಾಹನಗಳ ಓಡಾಟ ಜಾಸ್ತಿಯಾಗಿರುವುದರಿಂದಲೂ ರಸ್ತೆ ಸಾಕಷ್ಟು ಅಗಲವಿಲ್ಲದಿರವುದರಿಂದಲೂ ಹಾಗೂ ಈ ಹೆದ್ದಾರಿಯಲ್ಲಿರುವ ಅನೇಕ ಪಟ್ಟಣಗಳ ಮೂಲಕ ವಾಹನಗಳು ಹಾದು ಹೋಗಬೇಕಾಗಿರುವುದರಿಂದ ರಸ್ತೆ ಅಪಘಾತಗಳು ಹೆಚ್ಚುತ್ತಿದ್ದು ಸಾರ್ವಜನಿಕರಿಗೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ. ಈ ಬಗ್ಗೆ ರಸ್ತೆಯನ್ನು ಅಭಿವೃದ್ಧಿಪಡಿಸಲು ಕ್ರಮಗಳನ್ನು ತೆಗೆದುಕೊಳ್ಳಲಾಗುತ್ತಿದ್ದು ಈ ರಸ್ತೆಯಲ್ಲಿ ಇರುವ ಅಪಾಯಕಾರಿಯಾದ ತಿರುವುಗಳನ್ನು ನೇರ ಮಾಡುವುದು, ದುರ್ಬಲ ಸೇತುವೆಗಳ ಪುನರ್ ನಿರ್ಮಾಣ, ತೀವ್ರ ಸಂಚಾರ ದಟ್ಟಣೆ ಇರುವ ಭಾಗಗಳನ್ನು ಹಾಗೂ ನಗರ ಪ್ರದೇಶದಲ್ಲಿ ಬರುವ ಭಾಗಗಳನ್ನು ಅಗಲಪಡಿಸುವುದು ಮುಂತಾದ ಸಿವಿಲ್ ಕಾಮಗಾರಿಗಳನ್ನು 1990-91ನೇ ಸಾಲಿನಲ್ಲಿ 50 ಲಕ್ಷ ರೂ.ಗಳ ಅಂದಾಜಿನಲ್ಲಿ ತೆಗೆದುಕೊಳ್ಳಲಾಗಿದೆ. ಅಭಿವೃದ್ಧಿ ಕೆಲಸಗಳು ಮುಗಿಯುವ ಹಂತದಲ್ಲಿವೆ. 1991-92ನೇ ಸಾಲಿನಲ್ಲಿ ಹೆಚ್ಚಿನ ಅಭಿವೃದ್ಧಿ ಕೆಲಸಗಳಿಗಾಗಿ 7 ಲಕ್ಷ ರೂ. ಹಣ ಕೊಡಲಾಗುತ್ತದೆ.

ಅತಿ ವೇಗದಿಂದ, ನಿರ್ಲಕ್ಷ್ಯತನದಿಂದ, ಪಾನಮತ್ತರಾಗಿ ವಾಹನ ಚಾಲನೆ ಮಾಡುವವರ ವಿರುದ್ಧ ತಪಾಸಣೆ ನಡೆಸುವುದು, ಅಪಘಾತ ಸಂಭವಿಸುವ ಸ್ಥಳಗಳನ್ನು ಗುರ್ತಿಸಿ ವೇಗ ತಡೆಯಲು ರಸ್ತೆ ಉಬ್ಬುಗಳನ್ನು ಹಾಕುವುದು, ಸಂಚಾರ ನಿಯಮಗಳ ಪಾಲನೆಗಾಗಿ ತಿಳುವಳಿಕೆ ನೀಡುವುದು, ಸ್ಪೀಡ್‌ಟ್ರಾಪ್‌ಗಳನ್ನು ಅಳವಡಿಸಿ ಅತಿ ಹೆಚ್ಚು ವೇಗದಿಂದ ವಾಹನ ಚಾಲನೆ ಮಾಡುವವರ ಮೇಲೆ ಕ್ರಮ ತೆಗೆದುಕೊಳ್ಳುವುದು ಮುಂತಾದ ಕ್ರಮಗಳನ್ನು ಪೋಲೀಸ್ ಇಲಾಖೆಯವರು ತೆಗೆದುಕೊಳ್ಳುತ್ತಿದ್ದಾರೆ.

ಬೆಂಗಳೂರು-ಮೈಸೂರು ಮಧ್ಯ ಒಂದು ಪ್ರತ್ಯೇಕ ಎಕ್ಸ್‌ಪ್ರೆಸ್ ಹೆದ್ದಾರಿಯನ್ನು ನಿರ್ಮಿಸುವ ಪ್ರಸ್ತಾಪವೂ ಸಹ ಪರಿಶೀಲನೆಯಲ್ಲಿರುತ್ತದೆ.

3. ಹಾಸನ ಜಿಲ್ಲಾ ಪರಿಷತ್ತಿನಲ್ಲಿ ನಡೆಯಿತೆನ್ನಾಲಾದ ಅವ್ಯವಹಾರಗಳ ಬಗ್ಗೆ ಸಿ.ಓ.ಡಿ. ತನಿಖೆ ಮೇಲೆ ಕೈಗೊಂಡಿರುವ ಕ್ರಮ.

ಶ್ರೀ ಎ.ಟಿ. ರಾಮಸ್ವಾಮಿ (ಅರಕಲಗೂಡು): ಮಾನ್ಯ ಅಧ್ಯಕ್ಷರೆ, ಹಾಸನ ಜಿಲ್ಲಾ ಪರಿಷತ್ತಿನಲ್ಲಿ ಹಲವಾರು ಅವ್ಯವಹಾರಗಳು ನಡೆಯಿತೆನ್ನಲಾದ ಬಗ್ಗೆ ಸರ್ಕಾರಕ್ಕೆ ದೂರುಗಳು ಬಂದಿದ್ದು, ಸರ್ಕಾರವು ಅವುಗಳ ಬಗ್ಗೆ ತನಿಖೆ ನಡೆಸಲು ಸಿ.ಓ.ಡಿ.ಗೆ ಒಪ್ಪಿಸಿದ್ದು, ಈಗಾಗಲೇ ಸಿ.ಓ.ಡಿ.ಯವರು ತಮ್ಮ ವರದಿಯನ್ನು ನೀಡಿರುತ್ತಾರೆ. ಈ ಸಿ.ಓ.ಡಿ.ವರದಿಯ ಮೇಲೆ ಸರ್ಕಾರವು ಸಂಬಂಧಪಟ್ಟವರ ಮೇಲೆ ಕೂಡಲೇ ಕ್ರಮ ಕೈಗೊಳ್ಳುವುದು ಅವಶ್ಯಕವಾಗಿದೆ. ಇಲ್ಲದಿದ್ದರೆ, ಜನತೆಗೆ ಪಂಚಾಯತ್‌ರಾಜ್ ಸಂಸ್ಥೆಗಳ ಬಗ್ಗೆ ನಂಬಿಕೆಯೇ ಹೊರಟುಹೋಗುವ ಸಾಧ್ಯತೆಗಳಿರುವದರಿಂದ ಸರ್ಕಾರವು ಈ ಸಿ.ಓ.ಡಿ. ವರದಿಯ ಮೇಲೆ ಕ್ರಮ ಕೈಗೊಳ್ಳುವುದೇ ಎಂದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರ ಗಮನ ಸೆಳೆಯಬಯಸುತ್ತೇನೆ.

ಶ್ರೀ ಬಿ. ಬಸವಲಿಂಗಪ್ಪ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಮಂತ್ರಿಗಳು): ಮಾನ್ಯ ಅಧ್ಯಕ್ಷರೇ ಹಾಸನ ಜಿಲ್ಲಾ ಪರಿಷತ್ತಿನಲ್ಲಿ ಕಾಮಗಾರಿಗಳನ್ನು ತೆಗೆದುಕೊಂಡಿರುವ ಬಗ್ಗೆ ಹಾಗೂ ಪಕ್ಷಪಾತ ಮುಂತಾದ ಅವ್ಯವಹಾರಗಳ ಬಗ್ಗೆ ಕೂಲಂಕುಷವಾದ ತನಿಖೆ ನಡೆಸಲು ಪ್ರಕರಣವನ್ನು ಸಿ.ಓ.ಡಿ.ಯವರಿಗೆ ದಿನಾಂಕ 21-3-90ರಲ್ಲಿ ಗೃಹ ಇಲಾಖೆಯ ಮುಖಾಂತರ ವಹಿಸಲಾಗಿದೆ.

ಅಪಾದನೆಗಳು ಅಕ್ರಮಗಳು

1. ಸಾಮಾಜಿಕ ಅರಣ್ಯ ಯೋಜನೆಯಲ್ಲಿನ ನಿರ್ವಹಣೆಯಲ್ಲಿ ಅಕ್ರಮಗಳು.
   ಅ) ಇಲಾಖಾವತಿಯಿಂದ ನಿರ್ವಹಿಸಿದಂತೆ ಸುಳ್ಳು ಕಡತಗಳನ್ನು ಸೃಷ್ಟಿಸಿರುವುದು.